ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 615/2015

ಫಿರ್ಯಾದಿಃ ಕರ್ನಾಟಕ ಸರಕಾರ ಪರ ಸೇಡಂ ಪೋಲೀಸ್ ಠಾಣೆ

//ವಿರುದ್ಧ//

ಆರೋಪಿ ಃ ಸುಜಾರಾಮ ತಂದೆ ನೀತಿರಾಮ ಸೊಳಂಕಿ
ವಃ 48 ವರ್ಷ ಉಃ ಕಿರಾಣಿ ವ್ಯಾಪಾರ,
ಸಾಃ ಡಿ.ಬಿ.ಆರ್.ಕಂಪೌಂಡ್ ಮಾತೃಛಾಯ ಶಾಲೆಯ ಹತ್ತಿರ, ಸೇಡಂ,
ತಾಃ ಸೇಡಂ.

---

ದೋಷಾರೋಪಣೆ

ನಾನು ಶ್ರೀ. ಬಾಲು ಬಿ.ಎ.,ಎಲ್.ಎಲ್.ಬಿ. ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 24-12-2013 ರಂದು ಮಧ್ಯಾಹ್ನ 12-40 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣಾ ಹದ್ದಿಯ ಪೈಕಿ ಸೇಡಂ ಪಟ್ಟಣದಲ್ಲಿ ಆಪಾದಿತನು ಇಮಾಮಿ ಲಿಮಿಟೆಡ್ ಕಂಪನಿಯ ವತಿಯಿಂದ ತಯಾರಾದ ಜಂಡುಬಾಮ್ ಡಬ್ಬಿಗಳನ್ನು ಮಾರಾಟ ಮಾಡದೇ ನಕಲಿ ಜಂಡುಬಾಮ್ ಡಬ್ಬಿಗಳನ್ನು ತನ್ನ ಅಂಗಡಿಯಲ್ಲಿ ಇಟ್ಟುಕೊಂಡು ಅವುಗಳನ್ನು ವ್ಯಾಪಾರ ಮಾಡುತ್ತಿದ್ದಾಗ ಚಾಸಾ 1 ಮತ್ತು 4 ರಿಂದ 7 ನೇದ್ದವರು ಕೂಡಿಕೊಂಡು ಚಾಸಾ 2 ಮತ್ತು 3 ನೇದ್ದವರ ಸಮಕ್ಷಮ ಏಕಕಾಲಕ್ಕೆ ದಾಳಿ ಮಾಡಿ ಸದರಿ ಜಂಡುಬಾಮ್‌ಗಳನ್ನು ಜಪ್ತಿ ಪಡಿಸಿಕೊಳ್ಳಲಾಗಿದೆ. ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 63, 65 Copy Right Act 1957 and 103, 104 Trade Mark Act 1999 ರಡಿಯಲ್ಲಿ ಅಪರಾಧವನ್ನು ಎಸೆಗಿದ್ದು ನನ್ನ ಸಂಜ್ಞೆ ಯಲ್ಲಿ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

---

ಆರೋಪಿತರ ಹೇಳಿಕೆ

ಪ್ರಃ 1 ಈ ಮೇಲ್ಕಂಡಂತೆ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2  ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

( ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ  19-11-2024                                    ಪ್ರ.ದ.ನ್ಯಾದಂ. ಸೇಡಂ.